ಆ. ಸಿಂಧಗಿ ಮತಕ್ಷೇತ್ರದಲ್ಲಿ ಈವರೆಗೆ ಸ್ವಜಲಧಾರಾ ಯೋಜನೆಗಾಗಿ ಸರ್ಕಾರದಿಂದ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ನಾಗಮಂಗಲ ತಾಲ್ಲೂಕಿನ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಯಲ್ಲಿ ಶಿಕ್ಷಕರ ಕೊರತೆ

185 (1567) ಶ್ರೀ ಎನ್. ಚಲುವರಾಯಸ್ವಮಿ (ನಾಗಮಂಗಲ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ತಾಲ್ಲೂಕಿನಲ್ಲಿ 1 ರಿಂದ 7ನೇ ತರಗತಿಯವರೆಗೆ ಇರುವ ಮಕ್ಕಳ ಸಂಖ್ಯಾಬಲದ ಮೇಲೆ ಇರುವ ಶಿಕ್ಷಕರ ಕೊರತೆ ಎಷ್ಟು; ಯಾವಾಗ ಈ ಕೊರತೆ ಪರಿಹರಿಸಲಾಗುವುದು;

ಆ. ನಾಗಮಂಗಲ ತಾಲ್ಲೂಕಿನಲ್ಲಿ ಪ್ರೌಡ ಶಾಲಾ ವಿಭಾಗದಲ್ಲಿ ಎಷ್ಟು ಶಿಕ್ಷಕರ ಹುದ್ದೆ ಕೊತರೆ ಇದೆ; ಯಾವಾಗ ಇದನ್ನು ಭರ್ತಿ ಮಾಡಲಾಗುವುದು; ಹಾಗೂ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಕಟ್ಟಡಗಳು ಅವಶ್ಯಕತೆ ಇದ್ದು ಇದರಲ್ಲಿ ಎಷ್ಟು ಕಾಮಗಾರಿಗಳು ಪೂರೈಸಿದ್ದು ಮತ್ತು ಬಾಕಿ ಇರುವ ಮಾಹಿತಿಯನ್ನು ಒದಗಿಸುವುದು;

ಇ. ನಾಗಮಂಗಲ ತಾಲ್ಲೂಕು ಬೋಗಾಧಿಯಲ್ಲಿ ಇದ್ದಂತಹ ಮಹಿಳಾ ಪದವಿ ಪೂರ್ವ ಕಾಲೇಜು ಬೇರೆ ಕಡೆಗೆ ಸ್ಥಳಾಂತರಿಸಲು ಕಾರಣವೇನು; ಇದು ಆ ಭಾಗದ ಜನರಿಗೆ ಬಹಳ ಅವಶ್ಯಕತೆ ಇದ್ದು ಪುನಃ ಅಲ್ಲಿಯೇ ಪ್ರಾರಂಭಿಸಲು ಸರಕಾರದ ಕ್ರಮವೇನು;

ಈ. ಮೈಲಾರಪಟ್ಟಣ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಿ ಕಾಲೇಜನ್ನಾಗಿ ಪರಿವರ್ತಿಸಲು ಸರಕಾರದ ಮುಂದೆ ಪ್ರಸ್ತಾವನೆ ಇದೆಯೆ;

ಪ್ರೋ. ಬಿ.ಕೆ. ಚಂದ್ರಶೇಶರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ನಾಗಮಂಗಲ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ 246 ಶಿಕ್ಷಕರ ಹುದ್ದೆಗಳೂ ಖಾಲಿ ಇದ್ದು ಪ್ರಸ್ತುತ ಶಿಕ್ಷಕರ ಕೊರತೆಯನ್ನು ನಿಯೋಜನೆಯ ಮೇಲೆ ಶಿಕ್ಷಕರನ್ನು ನಿಯೋಜಿಸಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಆಗುವ ತೊಂದರೆಯನ್ನು ಸದ್ಯಕ್ಕೆ ನಿವಾರಿಸಿದೆ. ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಸುಮಾರು 7000 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದ್ದು ನಾಗಮಂಗಲ ತಾಲ್ಲೂಕಿನಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಆ. ಈ ತಾಲ್ಲೂಕಿನಲ್ಲಿ 27 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಇವುಗಳನ್ನು ನೇರ ನೇಮಕಾತಿ ಹಾಗೂ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು. ತಾಲ್ಲೂಕಿನಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಿಗೂ ಸ್ವಂತ ಕಟ್ಟಡವಿರುವುದರಿಂದ ಹೆಚ್ಚುವರಿ ಕೊಠಡಿಗಳ ಅವಶ್ಯಕತೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರೌಢ ಶಾಲೆಗೆ ಸಂಬಂಧಿಸಿದಂತೆ ಕರಡಹಳ್ಳಿಗೆ ಈ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ಕಟ್ಟಡ ನಿರ್ಮಾಣಕ್ಕೆ ಆದೇಶ ನೀಡಿರುತ್ತಾರೆ.

ಇ. ಈ ಸಂತೆ ಮೈದಾನ ಬೋಗಾದಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ವಿದ್ಯಾರ್ಥಿಗಳ ಕೊರತೆಯ ಕಾರಣ ಅಗತ್ಯವಿರುವೆಡೆಗೆ ಸ್ಥಳಾಂತರಿಸಲಾಗಿದೆ.

ನಾಗಮಂಗಲ ಹಾಗೂ ತಾಲೂಕಿನಲ್ಲಿ ಈ ಕೆಳಕಂಡ 9 ಪದವಿ ಪೂರ್ವ ಕಲೇಜುಗಳು ನಡೆಯುತ್ತಿದ್ದು ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಗಿನಂತಿದೆ.

		ಪಿ.ಯು.ಸಿ	
		ಪ್ರಥಮ	ದ್ವಿತೀಯ
1.	ಸ.ಪ.ಪೂ.ಕಾ.ನಾಗಮಂಗಲ	408	404
2.	ಸ.ಪ.ಪೂ.ಕಾ.ಕದಬಹಳ್ಳಿ	90	87
3.	ಸ.ಪ.ಪೂ.ಕಾ.ದೇವಲಾಪುರ	38	52
4.	ಸ.ಪ.ಪೂ.ಕಾ.ಬೆಳ್ಳೂರು	151	189
5.	ಸ.ಪ.ಪೂ.ಕಾ.ಚೀಣ್ಯ	49	53
6.	ಸ.ಪ.ಪೂ.ಕಾ.ಬಿಂಡಿಗನವಿಲ್	79	51
7.	ಮಾದರಿ ಬಾಲಿಕಾ ಪ.ಪೂ.ಕಾ ನಾಗಮಂಗಲ	80	91
8.	ಶ್ರೀ ಗಂಗಾಧರೇಶ್ವರಸ್ವಾಮಿ ಪ.ಪೂ.ಕಾ.ಆದಿಚುಂಚುನಗಿರಿ	206	187
9.	ಶ್ರೀ ಭಕ್ತನಾಥ ಪಪೂಕಾ ಬೆಳ್ಳೂರು	144	84

ಮೇಲಿನ ಮಾಹಿತಿಯನ್ವಯ ಕ್ರಮ ಸಂಖ್ಯೆ: 1,4,8 ಮತ್ತು 9ರ ಪದವಿ ಪೂರ್ವ ಕಾಲೇಜುಗಳನ್ನು ಹೊರತುಪಡಿಸಿ ಉಳಿದ 5 ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳ ಸಂಖ್ಯೆಯಿರುವುದಿಲ್ಲ. ಈ 5 ಪದವಿ ಪೂರ್ವ ಕಾಲೇಜುಗಳಲ್ಲಿಯೇ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶವಿರುತ್ತದೆ. ಆದ್ದರಿಂದ ಬೋಗಾದಿಯಲ್ಲಿ ಮತ್ತು ಅದೇ ರೀತಿ ಮೈಲಾರಪಟ್ಟಣದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯುವ ಅವಶ್ಯಕತೆ ಸಧ್ಯಕ್ಕೆ ಕಂಡು ಬರುವುದಿಲ್ಲ.

ಭಾಲ್ಕಿ ಕ್ಷೇತ್ರದಲ್ಲಿ ಸಂಘ ಸಂಸ್ಥೆಗಳಿಗೆ ಆರ್ಥಿಕ ನೆರವು

186(1573) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬಾಲ್ಕಿ ಕ್ಷೇತ್ರಕ್ಕೆ 1999-2000 ದಿಂದ ಇಲ್ಲಿಯವರೆಗೆ ಯಾವ ಯೋಜನೆಯಡಿಯಲ್ಲಿ ಎಷ್ಟು ಆರ್ಥಿಕ ನೆರವನ್ನು ನೀಡಲಾಗಿದೆ (ವಿವರಗಳನ್ನು ಒದಗಿಸುವುದು)

ಆ. 2003-04ರಲ್ಲಿ ಈ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ?

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು)

ಅ. ಒಟ್ಟು ರೂ. 95,000 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ವಿಧಾನಸಭಾ ಕ್ಷೇತ್ರಾವಾರು ಅನುದಾನ ಬಿಡುಗಡೆ ಮಾಡುವ ಪದ್ಧತಿ ಇಲಾಖೆಯಲ್ಲಿ ಜಾರಿಯಲ್ಲಿರುವುದಿಲ್ಲ. ಬದಲಿಗೆ 02-03ನೇ ಸಾಲಿನಿಂದ ಪ್ರತಿ ತಾಲ್ಲೂಕಿಗೆ ರೂ. 25,000-00 ಗಳಂತೆ ಅನುದಾನ ಬಿಡುಗಡೆ ಮಾಡುವ ಯೋಜನೆಯನ್ನು ಜಾರಿಗೆ ತರಲಾಗಿದೆ.